ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ

ಹಾಗೂ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಜಿ.ಎಂ. ಪಾಟೀಲ್

ಎಸ್.ಪಿ. ಸತ್ಯನಾರಾಯಣ -ವಿರುದ್ಧ ಕಿರ್ಲೋಸ್ಕರ್ ಎಲೆಕ್ಟ್ರಾನಿಕ್ ಕಂ. ನಿ. ಆಡಳಿತ ಮಂಡಳಿ

ರಿಟ್ ಅಪೀಲುಸಂಖ್ಯೆ: 30329/2013 (ಎಲ್-ಟಿಇಆರ್), ದಿನಾಂಕ 13 ನೇ ಆಗಸ್ಟ್, 2019.

ತೀರ್ಪು

ನ್ಯಾಯಮೂರ್ತಿ ಶ್ರೀ ಎಸ್.ಎನ್. ಸತ್ಯನಾರಾಯಣ:

ರಿಟ್ ಅರ್ಜಿಸಂಖ್ಯೆ: 17464/2007 ರಲ್ಲಿ ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರ ಮುಂದಿದ್ದ ಅರ್ಜಿದಾರರು ಇಲ್ಲಿನ ಅಪೀಲುದಾರ ಸಂಸ್ಥೆಯಲ್ಲಿದಿನಾಂಕ: 18.01.2001 ರ ಇತ್ಯರ್ಥ ವಿವರಣ ಪತ್ರದ ನಿಬಂಧನೆಗಳನ್ನು ಅನುಸರಿಸಿ ಕಾರ್ಮಿಕನು ವಜಾಗೊಂಡ ದಿನಾಂಕದಿಂದ ವಯೋನಿವೃತ್ತಿ ಹೊಂದುವವರೆಗೆ ಅಂದರೆ 57 ವರ್ಷ ತಲುಪುವವರೆಗೆ ಶೇ .10 ರಷ್ಟು ಹಿಂದಿನ ಮಜೂರಿಗಳೊಂದಿಗೆ ಅರ್ಜಿದಾರನಿಗೆ ಪರಿಹಾರ ನೀಡಿ ಮಾನ್ಯ ಏಕ-ಸದಸ್ಯ ಪೀಠದ ನ್ಯಾಯಾಧೀಶರು ಪರಿಗಣಿಸಿರುವದಿನಾಂಕ: 14.2.2013 ರ ಆದೇಶವನ್ನು ಪ್ರಶ್ನಿಸಿ ಇಂಟ್ರಾ ಕೋರ್ಟ್ ಅಪೀಲನ್ನು ಸಲ್ಲಿಸಿರುತ್ತಾರೆ.

2. ರಿಟ್ ಅರ್ಜಿಗೆ ಕಾರಣವಾಗಿರುವ ಸ್ಥೂಲ ಅಂಶಗಳು ಈ ಮುಂದಿನಂತಿವೆ:

ಇಲ್ಲಿನ ಅರ್ಜಿದಾರನು, ಪ್ರತ್ಯರ್ಜಿದಾರ ಆಡಳಿತ ಮಂಡಳಿ ಕಂಪನಿಯಲ್ಲಿ ತೋಟದ ಮಾಲೀಕನಾಗಿ ಕಾರ್ಯ ನಿರ್ವಹಿಸುತ್ತಿದ್ದನು.ಅಲ್ಲಿ ಅವನು ಕಂಪನಿಯ ಹಿತಾಸಕ್ತಿಗೆ ಬಾಧಕವಾಗುವಂಥ ಕೆಲವು ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ಆಡಳಿತ ಮಂಡಳಿಗೆ ತಿಳಿದುಬಂತು.ತದನುಸಾರವಾಗಿ, ಅವನ ವಿರುದ್ಧ ಮಾಡಲಾದ ಕೆಲವು ಆರೋಪಗಳನ್ನು ಪರ್ಯಾಲೋಚಿಸಲು ವಿಚಾರಣೆ ನಡೆಸಲು ಆದೇಶಿಸಿರುತ್ತದೆ.ಸದರಿ ವಿಚಾರಣೆಯಲ್ಲಿ, ಅವನ ವಿರುದ್ಧ ಮಾಡಲಾಗಿದ್ದ ಆರೋಪಗಳು ರುಜುವಾತಾಗಿವೆಯೆಂದು ಅಭಿಪ್ರಾಯಪಟ್ಟಿರುವುದು ಕಂಡು ಬಂದಿರುತ್ತದೆ.ಹಾಗಾಗಿ,ದಿನಾಂಕ: 02.02.1995 ರಂದು ಆತನನ್ನು ಸೇವೆಯಿಂದ ವಜಾಗೊಳಿಸಲಾಯಿತು.ವಜಾಗೊಂಡ ಸದರಿ ಆದೇಶವು, ಕೆಐಡಿ 20/1995 ಹಾಗೂ ಕೆಐಡಿ 21/1995 ರಲ್ಲಿ ಕರ್ನಾಟಕ ಕೈಗಾರಿಕಾ ನ್ಯಾಯಾಧಿಕರಣದ ಮುಂದೆ ಪ್ರಶ್ನಿಸಿದ್ದ ವಸ್ತು ವಿಷಯವಾಗಿದ್ದು, ಇದನ್ನು 19.04.2007 ರ ಸಾಮಾನ್ಯ ಐತೀರ್ಪಿನ ಮೂಲಕ ವಿಲೆ ಮಾಡಲಾಗಿತ್ತು.ಅದರಲ್ಲಿ ವಜಾವಣೆ ಆದೇಶವನ್ನು ತಳ್ಳಿ ಹಾಕಲಾಗಿತ್ತು.ಆದಾಗ್ಯೂ, ಇಲ್ಲಿನ ಅಪೀಲುದಾರರು ಆ ಸಮಯದಲ್ಲಿ ವಯೋ ನಿವೃತ್ತಿಯ ವಯಸ್ಸನ್ನು ತಲುಪಿದ್ದುದರಿಂದ, ಸೇವೆಯಿಂದ ಬಿಡುಗಡೆಯಾದ ದಿನಾಂಕದಿಂದ ನ್ಯಾಯಾಧಿಕರಣದ ಎದುರಿದ್ದ ವಿವಾದವು ವಿಲೆಯಾಗುವವರೆಗಿನ ಅವಧಿಗೆ ಸಂಬಂಧಿಸಿದ ಹಿಂದಿನ ಮಜೂರಿಗಳನ್ನು ಹೊರತುಪಡಿಸಿ, ಆತನ ಹುದ್ದೆಗೆ ಸಂಬಂಧಿಸಿದ ಎಲ್ಲಾ ಸೌಲಭ್ಯಗಳನ್ನು ನೀಡಿ ಆದೇಶವನ್ನು ಮಾಡಲಾಗಿತ್ತು.

3. ನ್ಯಾಯಾಧಿಕರಣದ ಸದರಿ ಆದೇಶವು ಭಾಗಶಃ ಇದರಲ್ಲಿನ ಅಪೀಲುದಾರನ ಪರವಾಗಿ ಇದ್ದಾಗ್ಯೂ ಸಹ, ರಿಟ್ ಅರ್ಜಿಸಂಖ್ಯೆ: 17464/2007 ರಲ್ಲಿ ಈ ನ್ಯಾಯಾಲಯದ ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರ ಎದುರು ಅವನು ಆ ಆದೇಶವನ್ನು ಪ್ರಶ್ನಿಸಿದ್ದ.ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರ ಮುಂದೆ ಅರ್ಜಿದಾರನ ದೂರು, ಮುಖ್ಯವಾಗಿ, ಹಿಂದಿನ ಮಜೂರಿಗಳಿಗೆ ಸಂಬಂಧಿಸಿದಂತೆ ಅವನ ಕೋರಿಕೆಯನ್ನು ಪರಿಗಣಿಸುತ್ತಿಲ್ಲ ಎಂಬುದಾಗಿದೆ.ಒಪ್ಪಿಕೊಂಡಿರುವಂತೆ, ರಿಟ್ ನ್ಯಾಯಾಲಯದ ಮುಂದೆ ಈತನು ಹಿಂದಿನ ಮಜೂರಿಯನ್ನು ಸಂದಾಯ ಮಾಡಲಿಲ್ಲವೆಂದು ಕುಂದುಕೊರತೆಯ ದೂರಿದ್ದರೂ ಸಹ, ನ್ಯಾಯಾಧಿಕರಣದ ಮುಂದೆ ಅಥವಾ ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರ ಮುಂದೆ 1995 ರಿಂದ ಕೆ.ಐ.ಡಿ.ಯ ಮುಂದೆ 19.04.2007 ರಂದು ವಿವಾದವನ್ನು ವಿಲೆ ಮಾಡುವವರೆಗಿನ ಮಧ್ಯಂತರ ಅವಧಿಯಲ್ಲಿ ಎಲ್ಲಿಯೂ ಹಣ ಗಳಿಕೆ ಮಾಡುವಂಥ ಉದ್ಯೋಗಿಯಾಗಿರಲಿಲ್ಲ; ಹಾಗೂ ತಾನು ಆದಾಯದ ಯಾವುದೇ ಮೂಲವನ್ನು ಹೊಂದಿರಲಿಲ್ಲವೆಂದು ವಾದಿಸಿರುವುದಿಲ್ಲ ಅಥವಾ ರುಜುವಾತುಪಡಿಸಿರುವುದಿಲ್ಲ.ಮೇಲೆ ಹೇಳಿದ ಹಿನ್ನೆಲೆಯಲ್ಲಿ, ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರು ನಿರ್ದಿಷ್ಟವಾಗಿ,ದಿನಾಂಕ: 14.02.2013 ರಂದಿನ ತನ್ನ ಆದೇಶದ 7 ಪ್ಯಾರಾದಲ್ಲಿ ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತಾರೆ:

66 “ ಆತ ತನ್ನ ಸೇವೆಯ ಮುಕ್ತಾಯದ ದಿನಾಂಕದಿಂದ ತಾನು ಆದಾಯ ಗಳಿಸುವ ಉದ್ಯೋಗದಲ್ಲಿರಲಿಲ್ಲವೆಂದು ವಾದಿಸಿರುವುದಿಲ್ಲ.ಆತನ ನಿರುದ್ಯೋಗಕ್ಕೆ ಸಂಬಂಧಿಸಿದಂತೆ ಹಾಗೂ ಯಾವುದೇ ಆದಾಯ ಮೂಲ ಹೊಂದಿರಲಿಲ್ಲವೆಂಬುದಕ್ಕೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯವನ್ನು ಒದಗಿಸಿರುವುದಿಲ್ಲ.ಸೇವೆ ಮುಕ್ತಾಯಗೊಂಡ ದಿನಾಂಕದಿಂದ ನಿರುದ್ಯೋಗಿಯಾಗಿದ್ದ ಹಾಗೂ ಯಾವುದೇ ಆದಾಯ ಮೂಲ ಹೊ ಂ ದಿರಲಿಲ್ಲವೆ ಂ ಬುದಕ್ಕೆ ಸ ಂ ಬ ಂ ಧಿಸಿದ ಂ ತೆ ರುಜುವಾತುಪಡಿಸಬೇಕಾದ ಆರಂಭಿಕ ಹೊಣೆ ಕಾರ್ಮಿಕರ ಮೇಲಿರುತ್ತದೆ. ಪ್ರಸ್ತುತ ಪ್ರಕರಣದಲ್ಲಿ, ಆತನ ಸೇವೆ ಎಸ್.ಪಿ. ಸತ್ಯನಾರಾಯಣ -ವಿರುದ್ಧ- ಕಿರ್ಲೋಸ್ಕರ್ ಎಲೆಕ್ಟ್ರಾನಿಕ್ ಕಂ. ನಿ. ಆಡಳಿತ ಮಂಡಳಿ ಮುಕ್ತಾಯಗೊಂಡ ದಿನಾಂಕದಿಂದ ತಾನು ಯಾವುದೇ ಆದಾಯ ತರುವ ಉದ್ಯೋಗದಲ್ಲಿರಲಿಲ್ಲವೆಂದಾಗಲೀ ವಾದಿಸಿರುವುದಿಲ್ಲ ಅಥವಾ ಯಾವುದೇ ಆದಾಯವನ್ನು ಗಳಿಸಿರುವುದಿಲ್ಲವೆಂಬುದಕ್ಕೆ ಸಂಬಂಧಿಸಿದ ಯಾವುದೇ ಸಾಕ್ಷ್ಯವನ್ನು ಹಾಜರುಪಡಿಸಿರುವುದಿಲ್ಲ.ಮಧ್ಯಂತರ ಪರಿಹಾರಕ್ಕೆ ಸಂಬಂಧಿಸಿದಂತೆ ಸಲ್ಲಿಸಿದ ಅರ್ಜಿಯಲ್ಲಿ ಮಾಡಿದ ವಾದವನ್ನು ಮುಖ್ಯ ವಾದದಂತೆ ಪರಿಗಣಿಸಲು ಸಾಧ್ಯವಿಲ್ಲ.”

ಅಪೀಲುದಾರ ಹಾಗೂ ಪ್ರತ್ಯರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಿರುತ್ತೇವೆ.ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರ ಆದೇಶ ಹಾಗೂ ಅದರಲ್ಲಿ ಉಲ್ಲೇಖಿಸಿದ ಹಲವಾರು ತೀರ್ಪುಗಳು ಹಾಗೂ ಈ ವ್ಯವಹರಣೆಗಳಲ್ಲಿ ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು ತಪಶ್ ಕುಮಾರ್ ಪೌಲ್ -ವಿರುದ್ಧ ಬಿಎಸ್‌ಎನ್‌ಎಲ್ ಹಾಗೂ ಮತ್ತೊಬ್ಬರು ' ಪ್ರಕರಣದಲ್ಲಿ ಅಭಿಪ್ರಾಯಪಟ್ಟಿರುವ ತೀರ್ಪನ್ನು ಸಹ ಉದಾಹರಿಸಿರುತ್ತಾರೆ.ಸದರಿ ತೀರ್ಪಿನಲ್ಲಿ ವಿಧಿಸಿರುವ ಕಾನೂನು ಹಿಂದಿನ ಮಜೂರಿಗಳ ಸಂದಾಯಕ್ಕೆ ಸಂಬಂಧಿಸಿದ ತನ್ನ ಕೇಮಿಗೆ ಪೂರಕವಾಗಿದೆ ಎಂಬ ಕಾರಣದ ಮೇಲೆ ಅರ್ಜಿದಾರರ ಪರ ವಕೀಲರು ಸದರಿ ತೀರ್ಪನ್ನು ಅವಲಂಬಿಸಿದ್ದಾರೆ.

4. ಆದಾಗ್ಯೂ, ದಾಖಲೆಯಲ್ಲಿ ಲಭ್ಯವಿರುವ ಇಡೀ ವಿಷಯವನ್ನು ಪರಿಶೀಲಿಸಿದಾಗ, ಕಾರ್ಮಿಕ ನ್ಯಾಯಾಲಯವು, ತಪ್ಪಿತಸ್ಥ ಉದ್ಯೋಗಿಯ ವಿರುದ್ಧ ಆರೋಪಗಳು ರುಜುವಾತಾಗಿರುವುದಿಲ್ಲವೆಂದು

ಅಭಿಪ್ರಾಯಪಟ್ಟಿದ್ದಾಗ್ಯೂ, ಉದ್ಯೋಗಿಯು 57 ವರ್ಷಗಳ ವಯೋನಿವೃತ್ತಿ ವಯಸ್ಸನ್ನು ಈಗಾಗಲೇ ಪೂರ್ಣಗೊಳಿಸಿರುತ್ತಾನೆಂಬ ವಾಸ್ತವಾಂಶವನ್ನು ಪರಿಗಣಿಸಿದ ತರುವಾಯ, ಹಿಂದಿನ ಮಜೂರಿಯನ್ನು ಹೊರತುಪಡಿಸಿ ಎಲ್ಲಾ ಸೌಲಭ್ಯಗಳಿಗೆ ಅವನು ಹಕ್ಕುಳ್ಳವನಾಗಿರುತ್ತಾನೆಂದು ಅಭಿಪ್ರಾಯಪಟ್ಟಿರುತ್ತದೆ.

5. ಕಾರ್ಮಿಕ ನ್ಯಾಯಾಲಯದ ಮುಂದಿನ ವ್ಯವಹರಣೆಗಳಲ್ಲಾಗಲೀ, ಇಲ್ಲವೆ ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರ ಮುಂದೆ ಸಲ್ಲಿಸಿದ ರಿಟ್ ಅರ್ಜಿಯಲ್ಲಾಗಲೀ, ತಪ್ಪಿತಸ್ಥ ಉದ್ಯೋಗಿಯು ನಿರುದ್ಯೋಗಿಯಾಗಿರುತ್ತಾನೆಂದು; ಇಲ್ಲವೆ ಮಧ್ಯಂತರ ಅವಧಿಯಲ್ಲಿ ಆತನಿಗೆ ಯಾವುದೇ ಆದಾಯದ ಮೂಲ ಇರಲಿಲ್ಲವೆಂದೂ; ಹಾಗೂ ಆತ ಹಣಕಾಸು ನಷ್ಟವನ್ನು ಅನುಭವಿಸಿರುತ್ತಾನೆಂಬುದನ್ನು ಪುಷ್ಠಿಕರಿಸಲು ಯಾವುದೇ ವಾದ ಮಾಡಿರುವುದಿಲ್ಲ ಅಥವಾ ಸಾಕ್ಷ್ಯ ಮಾಡಿಸಿರುವುದಿಲ್ಲ ಎ ಂ ಬ ಕಾರಣದ ಮೇಲೆ ಹಿ ಂ ದಿನ ಮಜೂರಿಗಳ ನಿರಾಕರಣೆಗೆ ಸ ಂ ಬ ಂ ಧ ಪಡುವಷ್ಟರ ಮಟ್ಟಿಗೆ ನ್ಯಾಂಯಾಧಿಕರಣದ ಆದೇಶವನ್ನು ಸಮರ್ಥನೀಯವಾಗಿರುವುದಿಲ್ಲವೆಂದು ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರ ವಾಸ್ತವಿಕ ನಿರ್ಣಯವಿರುವಂಥ ರಿಟ್ ಅರ್ಜಿಸಂಖ್ಯೆ: 17464/2007 ರಲ್ಲಿ ರಿಟ್ ಅರ್ಜಿಯನ್ನು ಉದ್ಯೋಗಿಯು ಸಲ್ಲಿಸಿದ್ದು, ಸದರಿ ನಿರ್ಣಯವನ್ನು ಇಲ್ಲಿ ಪ್ರಶ್ನಿಸಲಾಗಿರುತ್ತದೆ.

6. ಇದಕ್ಕೆ ಪ್ರತಿಯಾಗಿ, ಉದ್ಯೋಗಿಯು ತನ್ನ ಹೆಂಡತಿಯ ಹೆಸರಿನಲ್ಲಿ ಒಂದು ವ್ಯವಹಾರವನ್ನು ನಡೆಸುತ್ತಿದ್ದಾನೆಂದೂ, ಇದರಿಂದ ಸಾಕಷ್ಟು ಆದಾಯವನ್ನು ಗಳಿಸುತ್ತಿದ್ದನೆಂದು ಉದ್ಯೋಗದಾತನು ಅಧೀನ ನ್ಯಾಯಾಲಯದ ಮುಂದೆ ಅದಕ್ಕೆ ಸಂಬಂಧಿಸಿದಂತೆ ವಾದವನ್ನು ಹಾಗೂ ಸಾಕ್ಷ್ಯಗಳನ್ನು ಮಂಡಿಸಿದಾಗ, ಉದ್ಯೋಗಿಯು ಅದನ್ನು ನಿರಾಕರಿಸುವಂಥ ಯಾವುದೇ ಪ್ರಯತ್ನ ನಡೆಸಿರುವುದಿಲ್ಲವೆಂಬುದನ್ನು ರುಜುವಾತುಪಡಿಸಲು ಪ್ರತ್ಯರ್ಜಿದಾರ ಆಡಳಿತ ಮಂಡಳಿಯು ಪ್ರಯತ್ನಿಸಿತ್ತೆಂದು ಅಭಿಪ್ರಾಯಪಡಲಾಗಿದೆ.ಈ ಹಿನ್ನೆಲೆಯಲ್ಲಿ, ರೀತು ಮಾರ್ಬಲ್ಸ್ -ವಿರುದ್ಧ ಪ್ರಭಾಕಾಂತ್ ಶುಕ್ಲಾ2010 ( 2) ಎಸ್ಸಿಸಿ 70 ಪ್ರಕರಣ ಹಾಗೂ ಜೆ.ಕೆ. ಸಿಂಥೆಟಿಕ್ಸ್ ಅ. -ವಿರುದ್ಧ ಕೆ.ಪಿ. ಅಗರ್ವಾಲ್ ಹಾಗೂ ಮತ್ತೊಬ್ಬರು ಪ್ರಕರಣದಲ್ಲಿ ಹಾಗೂ ಭಾರತದ ವಿಮಾನ ನಿಲ್ದಾಣ ಪ್ರಾಧಿಕಾರ ಹಾಗೂ ಶಂಭುನಾಥ್ದಾಸ್ @ ಎಸ್.ಎನ್. ದಾಸ್ 2008 III ಎಲ್ಎಲ್ಜೆ 353 (ಎಸ್ಸಿ) ಮೊಕದ್ದಮೆಗಳಲ್ಲಿ ಸಲ್ಲಿಸಿದ ಹಲವಾರು ತೀರ್ಪುಗಳನ್ನು ಗಮನಿಸಿದ ತರುವಾಯ, ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರು ಆತನ ಮನವಿಯನ್ನು ಪರಿಗಣಿಸಿರುತ್ತಾರೆ. ಸೂಕ್ತ ಕಾರಣಗಳನ್ನು ನೀಡಿದ ತರುವಾಯ, ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರ ಮುಂದೆ ಅರ್ಜಿದಾರರಾಗಿರುವಂಥ ಇದರಲ್ಲಿನ ಅರ್ಜಿದಾರನು ಹಿಂದಿನ ಮಜೂರಿಗಳ ಪರಿಹಾರವನ್ನು ನಿರಾಕರಿಸಿದಂಥ ಕಾರ್ಮಿಕ ನ್ಯಾಯಾಲಯದ ತೀರ್ಪನ್ನು ಮರು ಪರಿಶೀಲನೆಗೆ ಸಲ್ಲಿಸಲು ಯಾವುದೇ ಪ್ರಯತ್ನ ಮಾಡಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ.

7. ಆದಾಗ್ಯೂ, ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರು, ಉದ್ಯೋಗಿಯ ಸೇವೆಯು ಮುಕ್ತಾಯಗೊಂಡ ದಿನಾಂಕದಿಂದ ವಯೋನಿವೃತ್ತಿಯ ಅಂದರೆ 57 ವರ್ಷಗಳ ವಯಸ್ಸನ್ನು ತಲುಪುವವರೆಗೂ ಹಿಂದಿನ ಮಜೂರಿಗಳ ಶೇ .10 ರಷ್ಟನ್ನು ನೀಡುವ ಬಗ್ಗೆ ಕಾರ್ಮಿಕ ನ್ಯಾಯಾಲಯವು ನೀಡಿದ ಆದೇಶವನ್ನು ಮಾರ್ಪಾಡುಗೊಳಿಸುವ ಮೂಲಕ ಉದ್ಯೋಗಿಗೆ ಪರಿಹಾರ ನೀಡುವ ವಿಷಯದಲ್ಲಿ ಉದಾರವಾಗಿ ಪ್ರಯತ್ನಿಸಿತ್ತು.ಮಾನ್ಯ ಏಕ ಸದಸ್ಯ ಪೀಠದ ನ್ಯಾಯಾಧೀಶರ ಸದರಿ ಆದೇಶವು ಸಕಾರಣಯುತವೂ, ನ್ಯಾಯಸಮ್ಮತವೂ ಆಗಿದ್ದು, ಈ ಕಾರಣಕ್ಕಾಗಿ, ಸದರಿ ಇಂಟ್ರಾ ಕೋರ್ಟ್ ಅಪೀಲಿನಲ್ಲಿ ಈ ನ್ಯಾಯಾಲಯದ ಮಧ್ಯ ಪ್ರವೇಶದ ಅವಶ್ಯಕತೆಯಿರುವುದಿಲ್ಲ.ತದನುಸಾರವಾಗಿ ಈ ರಿಟ್ ಅಪೀಲನ್ನು ವಜಾಗೊಳಿಸಲಾಗಿರುತ್ತದೆ.